**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಕುಂದಾಪುರ**

ಒ.ಎಸ್.ನಂಬ್ರಃ 385/2018
ಡಿ.ಡಬ್ಲ್ಯೂ : 1

ದಿನಾಂಕಃ 12-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ವಾದಿ ಪರ ಶ್ರೀ ಎಮ್. ಎಮ್ .ಎಚ್ . ವಕೀಲರಿಂದಃ

1. ನನ್ನ ತಾಯಿಯ ಹೆಸರು ದುರ್ಗಿ. ದುರ್ಗಿಗೆ ನಾನು ಅನಂತ, ಚಿಕ್ಕು, ಈರು, ಮಂಜು ಮತ್ತು ವೆಂಕಟೇಶ ಮಕ್ಕಳಿರುತ್ತೇವೆ.ನಾವೆಲ್ಲರೂ ಬಿಲ್ಲವ ಪೂಜಾರಿಯವರು. ಅಳಿಯ ಸಂತಾನ ಕಟ್ಟನ್ನು ಆಚರಿಸಿಕೊಂಡು ಬರುತ್ತಿರುತ್ತೇವೆ. ದುರ್ಗಿಯ ಕವರು ಎಂದರೆ ನಾನು, ಚಿಕ್ಕು ಪೂಜಾರ್ತಿಯ ಮಕ್ಕಳು, ಈರು ಪೂಜಾರ್ತಿಯ ಮಕ್ಕಳು, ಮಂಜು ಮತ್ತು ವೆಂಕಟೇಶ. ದುರ್ಗಿಯ ಮಕ್ಕಳಲ್ಲಿ ನಾನೇ ಹಿರಿಯವ. ದುರ್ಗಿ ಮೃತ ಪಟ್ಟು 15 ವರ್ಷಗಳು ಮೇಲಾಗಿರುತ್ತದೆ.

2. ದುರ್ಗಿ ಇರುವಾಗ ಆಕೆಯೇ ಕುಟುಂಬದ ಯಜಮಾನಿ ಇದ್ದು ಈಗ ನಾನು ಕುಟುಂಬದ ಯಜಮಾನನಿರುತ್ತೇನೆ. ನಮ್ಮದು ಕೃಷಿಕರ ಕುಟುಂಬ. ಚಿಕ್ಕು ಪೂಜಾರಿ ಮೃತಪಟ್ಟು 15 ವರ್ಷ ಮೇಲಾಗಿರುತ್ತದೆ. ಮಂಜು ತೀರಿ ಹೋಗಿ 24 ವರ್ಷಗಳಾಗಿರುತ್ತದೆ. ಈರು ನನ್ನ ತಂಗಿ. ಆಕೆ ಮದುವೆ ಆಗಿ ಉಳ್ಳೂರು -74 ಗಂಡನ ಮನೆಯಲ್ಲಿ ವಾಸ ಇರುತ್ತಾಳೆ. ಮದುವೆ ಆದ ನಂತರ ಅವರ ಮನೆಯಲ್ಲಿ ವಾಸ ಇದ್ದರು. ಮಕ್ಕಳು ಯಾರು ಇರಲಿಲ್ಲ. ನಾನು ಆಜ್ರಿ ಗ್ರಾಮದ ವಾಸಿಯಲ್ಲ. ನನ್ನ ಆಧಾರ್ ಕಾರ್ಡ್ ಹಾಗೂ ರೇಶನ್ ಕಾರ್ಡ್ ಇರುವುದು ಬೆಳ್ಳಾಲದಲ್ಲಿ. ನನ್ನ ಆಧಾರ್ ಕಾರ್ಡ್ ಮತ್ತು ರೇಶನ್ ಕಾರ್ಡ್ ಆಜ್ರಿ ಗ್ರಾಮದ ವಿಳಾಸದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಆಜ್ರಿ ಗ್ರಾಮದಲ್ಲಿ ನನ್ನ ಹೆಂಡತಿಯ ಮನೆ ಇರುತ್ತದೆ. ಬೆಳ್ಳಾಲದಿಂದ ಸುಮಾರು 8 -9 ಮೈಲಿ ಆಗಬಹುದು. ಮದುವೆ ಆದ ನಂತರ ನಾನು ನನ್ನ ಹೆಂಡತಿಯ ಮನೆಯಲ್ಲಿ ವಾಸ ಇರುತ್ತೇನೆ ಎಂದರೆ ಸರಿಯಲ್ಲ.

3. ವ್ಯಾಜ್ಯದ 9 ಸ್ವತ್ತುಗಳ ದಣಿ ಮೂಡುಮುಂಡ ಬೆಳ್ಳಾಲದ ಗಿರಿಜಮ್ಮ ಶೆಡ್ತಿಯವರ ಗಂಡ ನಾರಾಯಣ ಶೆಟ್ಟಿ, ಡಿಕ್ಲರೇಶನ್ ಕಾನೂನು ಬಂದ 3-4 ವರ್ಷದ ಪೂರ್ಣದಲ್ಲಿ ಗೇಣಿ ತೆಗೆದುಕೊಳ್ಳಲಾಗಿರುತ್ತದೆ.ಅದು ಚಾಲುಗೇಣಿ ಆಗಿರುತ್ತದೆ. ಗೇಣಿ 12 ಮುಡಿ ಅಕ್ಕಿ,

50 ರೂ., ಬೆಲ್ಲದ ಡಬ್ಬಿ, 30 -35 ಬಿಟ್ಟಿ ಆಳು ದಣಿಗೆ ಕೊಡುತ್ತಿದ್ದೇವು. ಗೇಣಿ ಕೊಟ್ಟ ಬಗ್ಗೆ ರಶೀದಿ ಇರುವುದಿಲ್ಲ. ಅವರು ರಶೀದಿ ಕೊಟ್ಟಿರುವುದಿಲ್ಲ. ಎದುರುನುಡಿ ವಕೀಲರಿಗೆ ಕೊಟ್ಟಿರುತ್ತೇನೆ. ನಾನು ಎದುರುನುಡಿಯನ್ನು ಗಿರಿಜಮ್ಮ ಶೆಟ್ಟಿಯವರಿಗೆ ಬರೆದುಕೊಟ್ಟಿರುತ್ತೇನೆ. ಆ ಎದುರುನುಡಿಯಲ್ಲಿ ಎಷ್ಟು ಜಾಗ ಹಾಗೂ ಗೇಣಿ ಎಷ್ಟು ಎಂದು ಬರೆಯಲಾಗಿದೆಯಾ ಎಂದರೆ ಸಾಕ್ಷಿ ನಾನು ಓದಿ ನೋಡಿರುವುದಿಲ್ಲ, ಓದು ಬರಹ ನನಗೆ ಇಲ್ಲ ಎಂದು ನುಡಿಯುತ್ತಾರೆ. ನಾನು ಹಾಗೂ ಗಿರಿಜಮ್ಮ ಶೆಡ್ತಿ ಹೆಬ್ಬೆಟ್ಟು ಹಾಕಿರುತ್ತೇವೆ.

4. ಎಷ್ಟು ವರ್ಷಕ್ಕೆ ಎದುರುನುಡಿ ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಒಂದೇ ಸಲ ಎದುರುನುಡಿ ಬರೆದುಕೊಡಲಾಗಿರುತ್ತದೆ ಎಂದು ನುಡಿಯುತ್ತಾರೆ. ಆಕ್ಷೇಪ ಸಲ್ಲಿಸುವಾಗ ಎದುರುನುಡಿಯನ್ನು ವಕೀಲರಿಗೆ ಕೊಟ್ಟಿರುವುದಿಲ್ಲ. ಎದುರುನುಡಿಯ ಆಧಾರದ ಮೇಲೆ ಈ ಜಾಗಗಳನ್ನು ಗೇಣಿಗೆ ತೆಗೆದುಕೊಂಡಿದ್ದೇವು. ಎದುರುನುಡಿಯನ್ನು ಭೂ ನ್ಯಾಯ ಮಂಡಳಿಯ ತನಿಖೆ ಕಾಲದಲ್ಲಿ ಕೊಟ್ಟಿರುತ್ತೇನೆ. ಡಿಕ್ಲರೇಶನ್ ಅರ್ಜಿಯನ್ನು ನಾನೇ ಸಲ್ಲಿಸಿರುತ್ತೇನೆ. ಅರ್ಜಿ ಬರೆಯಲು ಮಾಹಿತಿಯನ್ನು ಕಾರ್ಕಳದವರಿಗೆ ಕೊಟ್ಟು ಬರೆಯಿಸಿ ಹಾಕಿರುತ್ತೇನೆ. ಭೂ ನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸುವಾಗ ಸತ್ಯದ ವಿಚಾರವನ್ನು ಹೇಳಿರುತ್ತೇನೆ.

5. ಭೂ ನ್ಯಾಯ ಮಂಡಳಿಯಲ್ಲಿ ತನಿಖೆ ಮಾಡಿರುವುದಿಲ್ಲ. ಹೆಬ್ಬೆಟ್ಟು ಹಾಕು ಎಂದು ಹೇಳಿದ್ದು ಹೆಬ್ಬೆಟ್ಟು ಹಾಕಿರುತ್ತೇನೆ. ಭೂ ನ್ಯಾಯ ಮಂಡಳಿಯಿಂದ ಪಡೆದ ದಾಖಲೆಯನ್ನು ನನ್ನ ಮಗನ ಕಡೆಯಿಂದ ಓದಿಸಿ ತಿಳಿದುಕೊಂಡಿರುತ್ತೇನೆ. ಆ ತೀರ್ಪು ಎಲ್ಲಾ ಸರಿ ಇರುತ್ತದೆ ಎಂದು ನನ್ನ ಮಗನ ಕಡೆಯಿಂದ ಓದಿಸಿ ತಿಳಿದುಕೊಂಡಿರುತ್ತೇನೆ. ಭೂ ನ್ಯಾಯ ಮಂಡಳಿಯಲ್ಲಿ ಅರ್ಜಿ ಹಾಕುವಾಗ ಸದರಿ ಭೂಮಿಯನ್ನು ನಮ್ಮ ಹಿರಿಯರು ಗೇಣಿ ತೆಗೆದುಕೊಂಡಿದ್ದು ಅಂತ ಹೇಳಿದ್ದರ ಮೇರೆಗೆ ನಮ್ಮ ಪರವಾಗಿ ತೀರ್ಪು ಆಗಿರುತ್ತದೆ ಎಂದರೆ ಸರಿ. ದಾವಾ ಸ್ಥಳವನ್ನು ನನ್ನ ತಾಯಿ ಗೇಣಿ ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿ ನಾನು ಸ್ವಂತ ತೆಗೆದುಕೊಂಡಿದ್ದು ಅದು 30 ಕುಂಟೆ ಗೇಣಿ ಎಂದು ನುಡಿಯುತ್ತಾರೆ.

6. ನಮ್ಮ ಒಟ್ಟಿಗೆ ಬಡಿಯಾ ಆಚಾರಿಯವರು ಸಹ ಡಿಕ್ಲರೇಶನ್ ಅರ್ಜಿ ಸಲ್ಲಿಸಿದ್ದರು. ಬಡಿಯಾ ಆಚಾರಿ ಸಲ್ಲಿಸಿದ ಸ್ಥಳಕ್ಕೆ ಸಂಬಂಧಿಸಿದಂತೆ ಆತನ ಹೆಂಡತಿ ಮಕ್ಕಳ ಹೆಸರಿಗೆ ತೀರ್ಪು ಆಗಿರುತ್ತದೆ ಎಂದರೆ ಸರಿ. ಬಡಿಯಾ ಆಚಾರಿ ಗೇಣಿಗೆ ತೆಗೆದುಕೊಂಡ ಸ್ಥಳ ಬೇರೆ, ನಮ್ಮ ಸ್ಥಳ ಬೇರೆ ಎಂದರೆ ಸರಿ, ಆದರೆ ಒಂದೇ ಸರ್ವೆ ನಂಬ್ರ ಇರುತ್ತದೆ. ದಾವಾ ಸ್ವತ್ತುಗಳನ್ನು ದುರ್ಗಿ

ಪೂಜಾರ್ತಿಯವರ ಹಿರಿಯರು ಗೇಣಿಗೆ ತೆಗೆದುಕೊಂಡ ಸ್ಥಳವಾಗಿದ್ದು ಕುಟುಂಬದ ಪರವಾಗಿ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ನಾನೇ ಸ್ವತಃ ಅರ್ಜಿ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನನಗೆ ಚಾಲುಗೇಣಿ ಎದುರುನುಡಿ ಬರೆದುಕೊಟ್ಟಿದ್ದು ಇಲ್ಲ, ನಾನು ಸ್ವತಃ ಚಾಲುಗೇಣಿಯನ್ನು ತೆಗೆದುಕೊಂಡಿದ್ದು ಇಲ್ಲ ಎಂದರೆ ಸಾಕ್ಷಿ ನಾನೇ ಸ್ವಂತ ತೆಗೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ.

7. ಉಳಿದ ಕುಟುಂಬದ ಸದಸ್ಯರಿಗೆ ಮೋಸ ಮಾಡುವ ಉದ್ದೇಶದಿಂದ ನಾನೇ ಸ್ವತಃ ಗೇಣಿ ತೆಗೆದುಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈರು ಪೂಜಾರಿಯವರ ಮಕ್ಕಳೆಲ್ಲಾ ಹುಟ್ಟಿ ಬೆಳೆದಿದ್ದು ವ್ಯಾಜ್ಯ ಸ್ಥಳದಲ್ಲಿರುವ ಮನೆಯಲ್ಲಿ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿದ RTC ನಾನು ಗೇಣಿ ತೆಗೆದುಕೊಂಡ ಬಗ್ಗೆ ಕಂಡು ಬರುವುದಿಲ್ಲ ಎಂದರೆ ಸಾಕ್ಷಿ RTC ಯಲ್ಲಿ ಕಂಡು ಬರುತ್ತದೆ, ಅಂತಹ RTC ಇರುತ್ತದೆ ಎಂದು ನುಡಿಯುತ್ತಾರೆ. ನಾನು ಗೇಣಿ ತೆಗೆದುಕೊಂಡ ಬಗ್ಗೆ ಯಾವುದೇ RTC ಯಲ್ಲಿ ಕಂಡು ಬರದೇ ಇರುವುದರಿಂದ ನಾನು ಆ RTC ಗಳನ್ನು ನ್ಯಾಯಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

8. ಕುಷ್ಟ ದುರ್ಗಿ ಹೆಂಗಸಿನ ಹಿರಿ ತಾಯಿಯ ಮಗ. ಅವರು ಇರುವುದು ವಂಡಾಬೇರುವಿನಲ್ಲಿ. ಬೆಳ್ವಾಲದಿಂದ 8 ಮೈಲಿ ದೂರ ವಂಡಾಬೇರು ಇರುತ್ತದೆ. ವಂಡಾಬೇರುವಿನಲ್ಲಿರುವ ಸ್ಥಳಗಳಿಗೆ ಕುಷ್ಟ ಅರ್ಜಿ ಸಲ್ಲಿಸಿರುತ್ತಾರೆ. ಆ ಆಸ್ತಿಗಳು ಕುಷ್ಟನ ಹೆಸರಿಗೆ ತೀರ್ಪು ಆಗಿರುತ್ತದೆ. ಆ ಆಸ್ತಿಗಳಿಗೆ ಸಂಬಂಧಿಸಿದಂತೆ ದುರ್ಗಿ ಹೆಂಗಸಿನ ಮಕ್ಕಳಿಗೆ ಹಕ್ಕು ಇರಬಹುದು. ಕುಷ್ಟ ಪೂಜಾರಿ ಈಗ ಮೃತಪಟ್ಟಿರುತ್ತಾನೆ. ಆತನಿಗೆ ತೀರ್ಪಾದ ಜಾಗದಲ್ಲಿ 2021 ರಲ್ಲಿ ಆತನ ಹೆಂಡತಿ ಮಕ್ಕಳು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಆ ಆಸ್ತಿಯಲ್ಲಿ ನಾವು ದುರ್ಗಿಯ ಮಕ್ಕಳು ಭಾಗ ಬೇಕು ಎಂದು ಯಾವುದೇ ಪ್ರಕರಣ ಸಲ್ಲಿಸಿರುವುದಿಲ್ಲ. ಕುಷ್ಟ ಸ್ವಂತ ಗೇಣಿ ತೆಗೆದುಕೊಂಡಿದ್ದರಿಂದ ಆ ಆಸ್ತಿಗಳನ್ನು ನಾವು ಕೇಳಿರುವುದಿಲ್ಲ ಎಂದರೆ ಸಾಕ್ಷಿ ನಾವು ಕೇಳಿರುವುದಿಲ್ಲ ಎಂದು ನುಡಿಯುತ್ತಾರೆ.

9. ವ್ಯಾಜ್ಯ ಸ್ಥಳದಲ್ಲಿನ ಮನೆಯ ಡೋರ್ ನಂಬ್ರ 2-420. ಸದರಿ ಡೋರ್ ನಂಬ್ರ 2-420 ರ ಮನೆಯ ಖಾತೆಯ ಹೆಸರು ನನ್ನ ಹೆಸರಿನಲ್ಲಿ ಇರುತ್ತದೆ, ಚಿಕ್ಕುವಿನ ಹೆಸರಿನಲ್ಲಿ ಇರುವುದಿಲ್ಲ. ಆ ಮನೆ ಚಿಕ್ಕುವಿನ ಹೆಸರಿನಲ್ಲಿ ಖಾತೆ ಆಗಿರುತ್ತದೆ ಎಂದರೆ ಸಾಕ್ಷಿ ನನ್ನ ಹೆಸರಿಗೆ ಆಗಿರುತ್ತದೆ, ನಾನು ಆ ದಾಖಲೆ ಹಾಜರು ಪಡಿಸುತ್ತೇನೆ ಎಂದು ನುಡಿಯುತ್ತಾರೆ. 2019 ರಲ್ಲಿ ಆ ಮನೆಯನ್ನು ಹೊಸದಾಗಿ ಕಟ್ಟಲಾಗಿದೆ ಎಂದರೆ ಸಾಕ್ಷಿ ನಾನೇ ಕಟ್ಟಿರುತ್ತೇನೆ ಎಂದು

ನುಡಿಯುತ್ತಾರೆ. ಆ ಮನೆ ಕಟ್ಟಲು ದುರ್ಗಿಯ ಎಲ್ಲಾ ಮಕ್ಕಳು ಹಣ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಅವರು ಕೊಟ್ಟಿರಬಹುದು, ನನಗೆ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಬ್ಯಾಂಕಿನಿಂದ ಸಾಲ ಮಾಡಿ ಮನೆ ಕಟ್ಟಿರುತ್ತೇನೆ. ಸಾಲ ಮಾಡಿದ ದಾಖಲೆ ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆ. ಮನೆ ಕಟ್ಟಲು ನಾನು ಸ್ವತಃ ಖರ್ಚು ಮಾಡಿರುವುದಿಲ್ಲ ಹಾಗೂ ಬ್ಯಾಂಕಿನಿಂದ ಸಾಲ ಪಡೆದಿಲ್ಲ ಎಂದರೆ ಸರಿಯಲ್ಲ.

10. 2018 ರ ನಂತರ ಸದರಿ ಜಾಗದ ಮೇಲೆ 5 ಲಕ್ಷ ಸಾಲ ಇರುತ್ತದೆ. ಸುಬ್ಬಯ್ಯ ಪೂಜಾರಿಯವರ ಮಗನ ವ್ಯವಹಾರಕ್ಕೆ ಸಾಲ ತೆಗೆದಿದ್ದ ಎಂದರೆ ಸಾಕ್ಷಿ ಅವನಿಗೆ ಸಾಲದ ಹಣ ಕೊಟ್ಟಿರುವುದಿಲ್ಲ, ನಾನು ಮನೆ ಕಟ್ಟಲು ಆ ಸಾಲ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಆ ಸಾಲ ಮಾಡಿದ್ದು ಈ ವ್ಯಾಜ್ಯ ಸಲ್ಲಿಸಿದ ನಂತರ ಎಂದರೆ ಸಾಕ್ಷಿ ಮೊದಲೇ ಸಾಲ ತೆಗೆದಿದ್ದೆ ಎಂದು ನುಡಿಯುತ್ತಾರೆ. ಸಾಲ ತೆಗೆಯಬಾರದು ಎಂದು ನ್ಯಾಯಲಯದಲ್ಲಿ ಹುಕ್ಕುಂ ಆಗಿರುತ್ತದೆ ಎಂದರೆ ಸಾಕ್ಷಿ ಸಾಲ ತೆಗೆದ ನಂತರ ನಾವು ಪಾವತಿ ಮಾಡಲು ಹೋಗಿರುವುದಿಲ್ಲ ಎಂದು ನುಡಿಯುತ್ತಾರೆ.

11. 4 ಎಕರೆ ಚಿಲ್ಲರೆ ಕೃಷಿ ಭೂಮಿ ಇರುತ್ತದೆ. ಖರ್ಚು ವೆಚ್ಚ ಎಲ್ಲಾ ಕಳೆದು 25 ಕ್ವಿಂಟಾಲ್ ಭತ್ತ ಸಿಗಬಹುದಾ ಎಂದರೆ ಸಾಕ್ಷಿ 25 ಸೇರು ಬರುತ್ತದೆ ಎಂದು ನುಡಿಯುತ್ತಾರೆ. ಎರಡು ತೆಂಗಿನ ಮರಗಳು ಇರಬಹುದು. 50 ಕೆ.ಜಿ. ಗೇರು ಬೀಜ ಆಗಬಹುದು. ಉತ್ಪತ್ತಿ ಎಂಬುವುದು 25 ಕ್ವಿಂಟಾಲ್ ಭತ್ತ, 2 ಸಾವಿರ ತೆಂಗಿನ ಕಾಯಿ, 3 ಕ್ವಿಂಟಾಲ್ ಗೇರು ಬೀಜ ಆಗುತ್ತದೆ ಎಂದರೆ ಸರಿಯಲ್ಲ. 3 ಕ್ವಿಂಟಾಲ್ ಅಡಿಕೆ ಆಗುತ್ತದೆ ಎಂದರೆ ಸರಿ, ಸಾಕ್ಷಿ ನಾನೇ 200 ಗಿಡ ನೆಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಬೇಸಾಯ ಎಲ್ಲಾ ಈರು ಮತ್ತು ಅವರ ಮಕ್ಕಳೆಲ್ಲಾ ಸೇರಿ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಎಲ್ಲರ ಸಹಾಕಾರದಿಂದ ವ್ಯವಸಾಯ ಮಾಡುತ್ತಿದ್ದೆನೆ ಎಂದರೆ ಸರಿಯಲ್ಲ. ನಾನು ಪಾಲು ಕೊಡುವುದಿಲ್ಲ ಎಂದು ಹೇಳಿದ ಮೇರೆಗೆ ಈಪ್ರಕರಣ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ನನ್ನ ಬಳಿ ಪಾಲು ಕೇಳಿರುವುದಿಲ್ಲ ಎಂದು ನುಡಿಯುತ್ತಾರೆ. ಎಲ್ಲಾ ಕುಟುಂಬದ ಸದಸ್ಯರಿಗೆ ಮೋಸ ಮಾಡಲು ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ**.**

ಓದಿ ಹೇ. ಕೇ. ಸರಿ ಇದೆ. ನನ್ನ ಹೇ. ಮೇ. ಬೆ. ಮಾಡಲಾಗಿದೆ

**2** ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ **(C/c)**